# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ದೂರವಾಣಿ ಸಂಖ್ಯೆ : 080-22212343

ಅಂತರ್ಜಾಲ : https://kptcl.karnataka.gov.in

ಇ-ಮೇಲ್ ವಿಳಾಸ : director.ahr.kptcl@gmail.com


**ವಿಷಯ:** ಕವಿಪ್ರನಿನಿಯ ಉಪಕೇಂದ್ರ ನಿರ್ಮಾಣಕ್ಕಾಗಿ ಅವಶ್ಯವಿರುವ ಖಾಸಗಿ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಖರೀದಿ ಮಾಡುವ ಸಂಬಂಧ ಅನುಸರಿಸಬೇಕಾದ ಕಾರ್ಯನೀತಿಯ ಬಗ್ಗೆ.

**ಓದಿದೆ:**
1. ಕವಿಪ್ರನಿನಿ/ಬಿ7/1425/98-99 ದಿನಾಂಕ 07/03/2003.
2. ಕವಿಪ್ರನಿನಿ/ಬಿ7/1436/2004-05 ದಿನಾಂಕ 03/06/2005.
3. ಕವಿಪ್ರನಿನಿ/ಬಿ7/1436/2004-05 ದಿನಾಂಕ 23/07/2005
4. ಸರ್ಕಾರದ ಆದೇಶ ಸಂಖ್ಯೆ: ಇಎನ್ 187 ಇಇಬಿ 2005 ದಿನಾಂಕ 17/02/2006.
5. ಕವಿಪ್ರನಿನಿ/ಬಿ7/1425/98-99 ಸಂ-1 ದಿನಾಂಕ 26/08/2008.
6. ಸರ್ಕಾರದ ಆದೇಶ ಸಂಖ್ಯೆ: ಕಂಇ 54 ಭೂಸ್ವಾಳ 2014 ದಿನಾಂಕ 31/05/2016.
7. ಕವಿಪ್ರನಿನಿ/ಬಿ7/1425/98-99 ಸಂ-1 ದಿನಾಂಕ 08/02/2017.
8. ಕವಿಪ್ರನಿನಿ/ಬಿ7/376/19-20 ದಿನಾಂಕ 16/04/2020.

**ಪೀಠಿಕೆ:**

1. ದಿನೇದಿನೇ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವುದು, ನೂತನ ಕೈಗಾರಿಕೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು, ನೀರಾವರಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಒದಗಿಸುವುದು, ಎಲ್ಲಾ ಗ್ರಾಹಕರಿಗೆ ಗುಣಮಟ್ಟದ ತಡೆರಹಿತ ವಿದ್ಯುತ್ ಒದಗಿಸುವುದು ಹಾಗೂ ಪ್ರಸರಣ ನಷ್ಟವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕವಿಪ್ರನಿನಿಯು ತನ್ನ ವಿದ್ಯುತ್ ಜಾಲವನ್ನು ಬಲಪಡಿಸಲು ರಾಜ್ಯಾದ್ಯಂತ ಹಲವಾರು ಉಪಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳನ್ನು ನಿರ್ಮಿಸುತ್ತಿದೆ.

2. ನೂತನ ಉಪಕೇಂದ್ರಗಳನ್ನು ನಿರ್ಮಿಸಲು ಲಭ್ಯವಿರುವ ಸರ್ಕಾರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1960 ಕಲಂ 20 (ಸಿ) ರನ್ವಯ ಜಿಲ್ಲಾಧಿಕಾರಿಗಳು ನಿರ್ಧರಿಸುವ ಮಾರುಕಟ್ಟೆ ಬೆಲೆಯ ಶೇಕಡಾ 50 ರಂತೆ ಹಂಚಿಕೆ ಮಾಡಿಸಿಕೊಳ್ಳಲಾಗುತ್ತಿದೆ. ಮುಂದುವರೆದಂತೆ, ಕೆಲವೊಂದು ಪ್ರಕರಣಗಳಲ್ಲಿ ಉಪಕೇಂದ್ರ ಸ್ಥಾಪಿಸಲು ಸೂಕ್ತವಾದ ಖಾಸಗಿ ಜಮೀನನ್ನು "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರನ್ವಯ ಕಡ್ಡಾಯವಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಅಲ್ಲದೆ, ಸರ್ಕಾರಿ

ಸಂಸ್ಥೆಗಳಾದ ಕೆ.ಐ.ಎ.ಡಿ.ಬಿ/ ಬಿ.ಡಿ.ಎ/ಇತರೆ ಸ್ಥಳೀಯ ಸಂಸ್ಥೆಗಳು (ಗ್ರಾಮ ಪಂಚಾಯಿತಿ ಇತ್ಯಾದಿ) ಗಳಿಂದ ಸಹ ಅವಶ್ಯವಿರುವ ಜಮೀನುಗಳನ್ನು ಗುತ್ತಿಗೆ ಮತ್ತು ಹಂಚಿಕೆ ಮೂಲಕ ಪಡೆದುಕೊಳ್ಳಲಾಗುತ್ತಿದೆ.

3. "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರ ಕಲಂ 46 ರಲ್ಲಿ ನೇರವಾಗಿ ಭೂ ಖರೀದಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಈ ಕಾಯ್ದೆಯ ಮೇರೆಗೆ ಸರ್ಕಾರವು ರಚಿಸಿರುವ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು 2015, ದಿನಾಂಕ 17/10/2015 ರಿಂದ ಜಾರಿಗೆ ಬಂದಿದ್ದು, ಈ ನಿಯಮಾವಳಿಗಳ ನಿಯಮ 31 ರಡಿ ಕೈಗಾರಿಕಾ ಉದ್ದೇಶಕ್ಕಾಗಿ ಗರಿಷ್ಠ 500 ಎಕರೆ ಹಾಗೂ ಇನ್ನಿತರ ಉದ್ದೇಶಗಳಿಗಾಗಿ ಗರಿಷ್ಠ 100 ಎಕರೆ ವಿಸ್ತೀರ್ಣದ ಖಾಸಗಿ ಜಮೀನನ್ನು ನೇರವಾಗಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಹೀಗೆ ನೇರವಾಗಿ ಖರೀದಿಸುವ ಪ್ರಕರಣಗಳಲ್ಲಿ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯ ಕಲ್ಪಿಸುವ ಅವಕಾಶದಿಂದ ವಿನಾಯಿತಿ ಇದೆ.

4. ಸರ್ಕಾರವು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಗಳಿಗೆ ಅಗತ್ಯವಿರುವ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಖರೀದಿಸಲು ದಿನಾಂಕ 31/05/2016 ರಲ್ಲಿ ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದಂತೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉಪವಿದ್ಯುತ್ ಕೇಂದ್ರಗಳ ನಿರ್ಮಾಣ ಹಾಗೂ ಇನ್ನಿತರ ಸಾರ್ವಜನಿಕ ಉಪಯುಕ್ತತೆಯುಳ್ಳ ಸರ್ಕಾರದ ಯೋಜನೆಗಳಿಗೆ ಗರಿಷ್ಠ 100 ಎಕರೆಗೆ ಮೀರದಂತೆ, ಖಾಸಗಿ ಜಮೀನನ್ನು ಭೂ ಮಾಲೀಕರಿಂದ ನಿಗಧಿಪಡಿಸಿದ ಮಾನದಂಡ / ಮಾರ್ಗಸೂಚಿಗಳನ್ನು ಅನುಸರಿಸಿ, ನೇರವಾಗಿ ಖರೀದಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

5. ರಾಜ್ಯ ಸರ್ಕಾರವು ಕವಿಪ್ರನಿನಿಯ ಉಪಕೇಂದ್ರ ಸ್ಥಾಪನೆಗಾಗಿ ಜಮೀನನ್ನು ಖರೀದಿಸಲು ಭೂ ಬೆಲೆ ನಿಗಧೀಕರಣ ಸಮಿತಿಯನ್ನು ದಿನಾಂಕ 17/02/2006 ರ ಆದೇಶದಲ್ಲಿ ರಚಿಸಿದ್ದು, ಸದರಿ ಸಮಿತಿಯಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರಾಗಿ, ಸಂಬಂಧಪಟ್ಟ ಸಹಾಯಕ ಕಮಿಷನರ್ ರವರನ್ನು ಹಾಗೂ ನಿಗಮದ ಪ್ರಸರಣ ವಲಯದ ಮುಖ್ಯ ಇಂಜಿನಿಯರ್ (ವಿ) ಮತ್ತು ಪ್ರಸರಣ ವೃತ್ತದ ಅಧೀಕ್ಷಕ ಇಂಜಿನಿಯರ್ (ವಿ) ರವರುಗಳನ್ನು ಸದಸ್ಯರನ್ನಾಗಿ ಮಾಡಲಾಗಿದೆ.

6. ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಂಗಬೆಟ್ಟು ಗ್ರಾಮದ 110/11ಕೆ.ವಿ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಸರ್ವೆ ಸಂಖ್ಯೆ 274/2 ರಲ್ಲಿ ಗುರುತಿಸಲಾದ 2.957 ಎಕರೆ ವಾಣಿಜ್ಯ ಉದ್ದೇಶಕ್ಕೆ ಪರಿವರ್ತಿಸಿದ ಖಾಸಗಿ ಜಮೀನನ್ನು ನೇರ ಖರೀದಿ ಮಾಡುವ ಪ್ರಸ್ತಾವನೆಯನ್ನು ದಿನಾಂಕ 04/08/2022 ರಂದು ನಡೆದ 132 ನೇ ಮಂಡಳಿ ಸಭೆಯ ಮುಂದೆ ಮಂಡಿಸಲಾಗಿತ್ತು. ಈ ಸಂಬಂಧ, ಮಂಡಳಿ ಸಭೆಯ ನಡವಳಿಯಲ್ಲಿ ಖಾಸಗಿ ಜಮೀನನ್ನು ಖರೀದಿಸುವ ಬಗ್ಗೆ ಕವಿಪ್ರನಿನಿಯ ಕಾರ್ಯನೀತಿಯನ್ನು ಮುಂಬರುವ ಮಂಡಳಿ ಸಭೆಯಲ್ಲಿ ಮಂಡಿಸಲು ನಿರ್ದೇಶನ ನೀಡಲಾಗಿತ್ತು.

7. ಕವಿಪ್ರನಿನಿಯ ಉಪಕೇಂದ್ರ ನಿರ್ಮಾಣಕ್ಕಾಗಿ ಸೂಕ್ತ ಖಾಸಗಿ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಖರೀದಿ ಮಾಡುವ ಬಗ್ಗೆ ಕರಡು ಕಾರ್ಯನೀತಿಯನ್ನು ದಿನಾಂಕ 27/12/2022 ರಂದು ನಡೆದ 137 ನೇ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಕವಿಪ್ರನಿನಿ/ಬಿ7/2003/2014-15/ಬೆಂಗಳೂರು** **ದಿನಾಂಕ 28/03/2023**

**ದಿನಾಂಕ** 27/12/2022 ರಂದು ನಡೆದ 137 ನೇ ಮಂಡಳಿ ಸಭೆಯ ನಡವಳಿಯನ್ವಯ ಕವಿಪ್ರನಿನಿಯ ಉಪಕೇಂದ್ರ ನಿರ್ಮಾಣಕ್ಕಾಗಿ ಸೂಕ್ತ ಖಾಸಗಿ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಖರೀದಿ ಮಾಡುವ ಬಗ್ಗೆ ಈ ಕೆಳಕಂಡ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಲು ಅದೇಶಿಸಿದೆ.

1. ನೂತನ ಉಪಕೇಂದ್ರ ನಿರ್ಮಿಸುವ ಸಂಬಂಧ ನಿಗಮದ ತಾಂತ್ರಿಕ ಸಮನ್ವಯ ಸಮಿತಿ ಸಭೆ (TCCM) ಯಲ್ಲಿ ಪ್ರಸ್ತಾವನೆ ಮಂಡಿಸಿ ಸದರಿ ಸಭೆಯ ಅನುಮೋದನೆ ಪಡೆದ ನಂತರ ಅವಶ್ಯವಿರುವ ಜಮೀನು ಖರೀದಿ ಸಂಬಂಧ ಅಗತ್ಯ ಕ್ರಮಕೈಗೊಳ್ಳುವುದು.
2. ಉಪಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಿರುವ ಹಾಗೂ ಮುಂಬರುವ ದಿನಗಳಲ್ಲಿ ಉಪಕೇಂದ್ರದ ವಿಸ್ತರಣೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ದಿನಾಂಕ 03/06/2005 ರ ನಿಗಮದ ಸುತ್ತೋಲೆಯಲ್ಲಿ ತಿಳಿಸಿದ ಮಾರ್ಗಸೂಚಿಯನ್ನು ಅನುಸರಿಸಿ ಸೂಕ್ತ ಜಮೀನನ್ನು ಗುರುತಿಸುವುದು.
3. ಉಪಕೇಂದ್ರ ಸ್ಥಾಪಿಸಲು ಸೂಕ್ತ ಸರ್ಕಾರಿ ಜಮೀನುಗಳನ್ನು ಗುರುತಿಸುವುದು ಪ್ರಥಮ ಆಧ್ಯತೆಯಾಗಿರುತ್ತದೆ. ಸೂಕ್ತ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಪ್ರಸರಣ ವಲಯದ ಮುಖ್ಯ ಇಂಜಿನಿಯರ್ (ವಿ) ರವರಿಂದ ಲಿಖಿತ ಅನುಮೋದನೆ ಪಡೆದು ಪರ್ಯಾಯ ಖಾಸಗಿ ಜಮೀನು ಖರೀದಿಸುವ ಬಗ್ಗೆ ಪರಿಶೀಲಿಸುವುದು.
4. ಖಾಸಗಿ ಜಮೀನು ಗುರುತಿಸುವಾಗ ಕೃಷಿ ಜಮೀನು ಮಾತ್ರ ಖರೀದಿಸಲು ಕ್ರಮಕೈಗೊಳ್ಳುವುದು. ಈ ಸಂಬಂಧ, ಉಪಕೇಂದ್ರ ನಿರ್ಮಿಸಲು ಉದ್ದೇಶಿಸಿರುವ ಗ್ರಾಮದ ವ್ಯಾಪ್ತಿಯಲ್ಲಿ ಸೂಕ್ತ ಜಮೀನು ಗುರುತಿಸಲು Clear title (ಶುದ್ಧ/ ಪೂರ್ಣ ಭೂ ದಾಖಲೆ) ಗಳನ್ನು ಹೊಂದಿರುವ ಜಮೀನನ್ನು ನೀಡಲು ಇಚ್ಛಿಸುವ ಭೂ ಮಾಲೀಕರುಗಳು ಅಗತ್ಯ ದಾಖಲೆಗಳೊಂದಿಗೆ Expression of interest (ಆಸಕ್ತಿ ಹೊಂದಿರುವ ಬಗ್ಗೆ) ಮಾದರಿಯಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಕೋರಿ ಪತ್ರಿಕಾ ಪ್ರಕಟಣೆ ನೀಡಿ, ನಂತರ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ತಾಂತ್ರಿಕ ಸೂಕ್ತತೆಯ ಬಗ್ಗೆ ಪರಿಶೀಲಿಸಿ, ಮುಂದಿನ ಕ್ರಮಕೈಗೊಳ್ಳುವುದು.

5. ಗುರುತಿಸಲಾದ ಖಾಸಗಿ ಜಮೀನು ಸಾಧ್ಯವಾದಷ್ಟು ಸಮತಟ್ಟಾಗಿದ್ದು, ಆಯಾತಕಾರದಲ್ಲಿದ್ದು, ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಒಳಬರುವ/ಹೊರಹೋಗುವ ವಿದ್ಯುತ್ ಪ್ರಸರಣ ಮಾರ್ಗಗಳ ರಚನೆಗೆ ಅನುಕೂಲಕರವಾಗಿದ್ದು ಹಾಗೂ ತಾಂತ್ರಿಕವಾಗಿ ಸೂಕ್ತವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
6. ಅಧೀಕ್ಷಕ ಇಂಜಿನಿಯರ್ (ವಿ), (ಆರ್ ಮತ್ತು ಡಿ) ರವರ ಕಚೇರಿಯಿಂದ Soil resistivity (ಮಣ್ಣಿನ ಪ್ರತಿರೋಧಕ) ಪರೀಕ್ಷೆ ನಂತರ ಜಮೀನಿನ ವಿಸ್ತೀರ್ಣ ಹಾಗೂ ಸೂಕ್ತತತೆಯ ಬಗ್ಗೆ ನಿರ್ಧಾರ ಕೈಗೊಳ್ಳುವುದು.
7. ಮುಖ್ಯ ಇಂಜಿನಿಯರ್ (ವಿ) (ಯೋ ಮತ್ತು ಸ) ರವರ ಕಚೇರಿಯ ಅಧೀಕ್ಷಕ ಇಂಜಿನಿಯರ್ (ಸಿವಿಲ್) ಹಾಗೂ ಅಧೀಕ್ಷಕ ಇಂಜಿನಿಯರ್ (ವಿ), (ತಾಂತ್ರಿಕ) ರವರುಗಳಿಂದ ಗುರುತಿಸಲಾದ 400ಕೆ.ವಿ ಹಾಗೂ 220ಕೆ.ವಿ ಉಪಕೇಂದ್ರಗಳ ಜಮೀನುಗಳ ಸೂಕ್ತತೆ ಬಗ್ಗೆ ಜಂಟಿ ಸ್ಥಳ ಪರಿವೀಕ್ಷಣೆ ನಡೆಸಿ, ಸದರಿಯವರುಗಳಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆದುಕೊಳ್ಳುವುದು.
8. ಉಪಕೇಂದ್ರ ನಿರ್ಮಾಣಕ್ಕಾಗಿ ದಿನಾಂಕ 07/03/2003 ರ ನಿಗಮದ ಆದೇಶದಲ್ಲಿ ರಚಿಸಲಾದ ವಲಯ ಮಟ್ಟದ ಭೂ ಖರೀದಿ ಸಮಿತಿಯಲ್ಲಿ ಭೂ ಖರೀದಿ ಪ್ರಸ್ತಾವನೆಗಳನ್ನು ಮಂಡಿಸಿ, ಅನುಮೋದನೆ ಪಡೆದು, ನಂತರ ಮುಂದಿನ ಕ್ರಮಕೈಗೊಳ್ಳುವುದು..
9. ಖಾಸಗಿ ಜಮೀನು ಖರೀದಿಸುವ ಸಂಬಂಧ ಸರ್ಕಾರದ ದಿನಾಂಕ 31/05/2016 ರ ಆದೇಶದಲ್ಲಿ ನೀಡಲಾದ ಮಾರ್ಗಸೂಚಿಯಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ದರ ನಿರ್ಧರಣಾ ಸಲಹಾ ಸಮಿತಿಯ ಮುಂದೆ ಪ್ರಸ್ತಾವನೆ ಸಲ್ಲಿಸಿ, ಸೂಕ್ತ ದರ ನಿಗಧಿಪಡಿಸಿಕೊಳ್ಳುವುದು. ಸದರಿ ಆದೇಶದಲ್ಲಿ ತಿಳಿಸಿರುವಂತೆ ನೇರವಾಗಿ ಖರೀದಿಸುವ ಜಮೀನಿನ ಮೌಲ್ಯವನ್ನು ನಿರ್ಧರಿಸುವಾಗ "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ರ" ಕಲಂ 26 ರಡಿ ನಿಗಧಿಪಡಿಸುವ ಭೂ ಮೌಲ್ಯದ ಗರಿಷ್ಟ ಮಿತಿಯನ್ನು ಮೀರುತ್ತಿಲ್ಲವೆಂದು ದರ ನಿರ್ಧರಣಾ ಸಲಹಾ ಸಮಿತಿಯಲ್ಲಿ ಖಚಿತಪಡಿಸಿಕೊಳ್ಳುವುದು.
10. ಗುರುತಿಸಲಾದ ಖಾಸಗಿ ಜಮೀನಿನ ಸಂಬಂಧ ಅವಶ್ಯವಿರುವ ಎಲ್ಲಾ ದಾಖಲೆಗಳನ್ನು ಭೂ ಮಾಲೀಕರಿಂದ ಪಡೆದು, ಸದರಿ ಜಮೀನುಗಳ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದಿಲ್ಲವೆಂದು ಹಾಗೂ ಯಾವುದೇ ತಕರಾರು/ವ್ಯಾಜ್ಯ ಇರುವುದಿಲ್ಲವೆಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು. ಹಾಗೂ ನಿಗಮದ ಪ್ಯಾನಲ್ ವಕೀಲರಿಂದ ಭೂ ದಾಖಲೆಗಳನ್ನು ಪರಿಶೀಲಿಸಿಕೊಳ್ಳುವುದು.

11. ಮೇಲಿನ ಅಂಶಗಳನ್ವಯ ಗುರುತಿಸಲಾದ ಖಾಸಗಿ ಜಮೀನನ್ನು ನಂತರದ ದಿನಗಳಲ್ಲಿ ಭೂ ಮಾಲೀಕರು ಮಾರಾಟ ಮಾಡಲು ಒಪ್ಪಿಗೆ ನೀಡದಿದ್ದ ಪಕ್ಷದಲ್ಲಿ, ಪರ್ಯಾಯ ಸೂಕ್ತ ಜಮೀನು ಸಹ ಲಭ್ಯವಿಲ್ಲದಿದ್ದಲ್ಲಿ, ಗುರುತಿಸಲಾದ ಜಮೀನನ್ನು ಜಿಲ್ಲಾಧಿಕಾರಿಗಳ ಮುಖಾಂತರ ಭೂ ಸ್ವಾಧೀನ ಕಾಯ್ದೆಯಡಿಯಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲು ಕ್ರಮಕೈಗೊಳ್ಳುವುದು.

12. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿಕೊಂಡು ಖಾಸಗಿ ಜಮೀನು ಖರೀದಿ ಪ್ರಸ್ತಾವನೆಯನ್ನು, ಪೂರ್ಣ ದಾಖಲೆ, ವಿವರ ಮತ್ತು ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸರಣ ವಲಯಗಳ ಮುಖ್ಯ ಇಂಜಿನಿಯರುಗಳು ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು, ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಅನುಮೋದನೆ ಪಡೆದು ನಂತರ ಜಮೀನು ಖರೀದಿ ಪ್ರಕ್ರಿಯೆ ಕಾರ್ಯಗತಗೊಳಿಸುವುದು.

13. ನಿಗಮ ಕಾರ್ಯಾಲಯದಿಂದ ಖಾಸಗಿ ಜಮೀನು ಖರೀದಿಗೆ ಅನುಮೋದನೆ ಪಡೆದ ನಂತರ, ಶಾಸನಬದ್ಧ ಮುದ್ರಾಂಕ ಶುಲ್ಕ ಹಾಗೂ ನೋಂದಣೆ ವೆಚ್ಚವನ್ನು ನಿಗಮದ ವತಿಯಿಂದ ಭರಿಸಿ, ಭೂ ಮಾಲೀಕರುಗಳಿಂದ ಖರೀದಿಸಿದ ಜಮೀನನ್ನು ಕೂಡಲೆ ನಿಗಮದ ಹೆಸರಿಗೆ ನೋಂದಣೆ ಮಾಡಿಸಿಕೊಳ್ಳುವುದು.

14. ನಿಗಮದ ದಿನಾಂಕ 16/04/2020 ರ ಸುತ್ತೋಲೆಯನ್ವಯ ನಿಗಮದ ಸ್ವಾಮ್ಯಕ್ಕೆ ಪಡೆಯಲಾದ ಎಲ್ಲಾ ಜಮೀನುಗಳನ್ನು ಸಂರಕ್ಷಿಸಿಕೊಳ್ಳಲು ಸೂಕ್ತ ಸುತ್ತುಗೋಡೆ ನಿರ್ಮಿಸಲು ಅಗತ್ಯ ಕ್ರಮಕೈಗೊಳ್ಳುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ),
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಪ್ರಸರಣ (ಕಾ)/ (ನಿ) ವೃತ್ತ, ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
9. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿ, ಕವಿಪ್ರನಿನಿ.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.